2018 ಕ.ತೀ.ವ. 747

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ

ಭಾಗವಮ್ಮ @ ಭಾಗ್ಯಶ್ರೀ -ವಿರುದ್ಧ- ಭೀಮರಾಯ*

ಕೌಟುಂಬಿಕ ನ್ಯಾಯಾಲಯುಗಳ ಅಧಿನಿಯುಮದ 19(4)ನೇ ಪ್ರಕರಣದ ಮೇರೆಗಿನ ಅರ್ಜಿ.

ಈ ಪುನರ್ ಪರಿಶೀಲನಾ ಅರ್ಜಿಯನ್ನು, ಅಂಗೀಕರಿಸುವುದಕ್ಕಾಗಿ ಪಟ್ಟಿ ಮಾಡಿದ್ದರೂ ಕೂಡ, ಎರಡೂ ಕಡೆಯ ಮಾನ್ಯ ವಕೀಲರ ಸಮ್ಮತಿಯ ಮೇರೆಗೆ ಇದನ್ನು ಅಂತಿಮವಾಗಿ ಆಲಿಸಲಾಗಿದೆ.

ಇಲ್ಲಿನ ಅರ್ಜಿದಾರರು, ದಿನಾಂಕ 06.08.2016ರ ಆದೇಶದ ಮೂಲಕ ಗುಲ್ಬರ್ಗಾದಲ್ಲಿರುವ ಕೌಟುಂಬಿಕ ನ್ಯಾಯಾಲಯವು, ಕ್ರಿಮಿನಲ್ ಸಂಕೀರ್ಣ ಸಂಖ್ಯೆ 80/2014ನ್ನು ವಜಾಗೊಳಿಸಿದ್ದರಿಂದ ಬಾಧಿತರಾಗಿದ್ದು, ಈ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇದನ್ನು ದಂಡ ಪ್ರಕ್ರಿಯಾ ಸಂಹಿತೆ 1973, (ದಂಡ ಪ್ರಕ್ರಿಯಾ ಸಂಹಿತೆ) 125ನೇ ಪ್ರಕರಣದ ಮೇರೆಗೆ ಸಲ್ಲಿಸಲಾಗಿದೆ.

ಕೌಟುಂಬಿಕ ನ್ಯಾಯಾಲಯುವು, ಎರಡೂ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಿದ್ದು, ಅವಳು ಪ್ರಾಪ್ತಳಾದ ಮೇಲೆ ಅವಳ ಜೀವನಾಂಶದ ಪರಿಹಾರವನ್ನು ಕೋರಲು ಅರ್ಜಿದಾರಳಿಗೆ ಸ್ವಾತಂತ್ರ್ಯವನ್ನು ಕಾಯ್ದಿರಿಸಿ

* ಆರ್.ಪಿ.ಎಫ್.ಸಿ. ಸಂಖ್ಯೆ 200059/2016, ದಿನಾಂಕ: 30ನೇ ಮಾರ್ಚ್, 2017.

ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯನ್ನು ವಜಾಗೊಳಿಸಿದೆ. ಅರ್ಜಿಯನ್ನು ವಜಾಗೊಳಿಸಿದ್ದರಿಂದ ಬಾಧಕಳಾಗಿರುವ ಕೌಟುಂಬಿಕ ನ್ಯಾಯಾಲಯದ ಮುಂದಿದ್ದ ಅರ್ಜಿದಾರಳು ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದ್ದಾಳೆ.

ಪ್ರಸ್ತುತ ಪ್ರಕರಣದಲ್ಲಿ, ಅರ್ಜಿದಾರಳು, ಯಾವುದೇ ದೈಹಿಕ ಅಥವಾ ಮಾನಸಿಕ ವಿಕಾರಗಳಿಗೆ ತುತ್ತಾಗಿಲ್ಲ. ಆದರೆ ಅರ್ಜಿದಾರಳು ಸತ್ಯವಾಗಿ, ಅನ್ಯಾಯಕ್ಕೆ ಒಳಗಾಗಿದ್ದು, ಈ ಕಾರಣದಿಂದ, ಅವಳು ತನ್ನನ್ನು ನಿರ್ವಹಿಸಿಕೊಳ್ಳಲು ಸಮರ್ಥಳಾಗಿಲ್ಲ. ನನ್ನ ದೃಷ್ಟಿಯಲ್ಲಿ 'ಅನ್ಯಾಯ' ಎಂಬ ಪದವನ್ನು ದೈಹಿಕ ಅಥವಾ ಮಾನಸಿಕ ವಿಕಾರಕ್ಕೆ ಸೀಮಿತಗೊಳಿಸಲಾಗುವುದಿಲ್ಲ. ಸಂಸತ್ತು, ಅನ್ಯಾಯ ಎಂಬ ಪದವನ್ನು ದೈಹಿಕ ಅಥವಾ ಮಾನಸಿಕ ವಿಕಾರತೆಯನ್ನು ಹೊರತುಪಡಿಸಿದ ಮತ್ತೊಂದು ಅರ್ಥ ನೀಡುತ್ತದೆಯೆಂದು ವಿವೇಚನಾಯುಕ್ತವಾಗಿ ಬಳಸಿದೆ. ಅನ್ಯಾಯ ಎಂಬ ಪದವನ್ನು ವಿಶಾಲಾರ್ಥದಲ್ಲಿ ವ್ಯಾಖ್ಯಾನ ಮಾಡಲೇಬೇಕು, ಆ ಸಲುವಾಗಿಯೇ ಅದರ ಉದ್ದೇಶ ಮತ್ತು ಸಂಕಲ್ಪವನ್ನು ವರ್ಧಿಸಲಾಗಿದ್ದು, ವಕ್ರದೃಷ್ಟಿಯಲ್ಲಿ ಅರ್ಥೈಸುವುದಲ್ಲ. ಅನ್ಯಾಯ ಎಂಬ ಪದವನ್ನು ಕಾನೂನಿನ ತಿಳಿವಳಿಕೆಯಲ್ಲಿ ಅರ್ಥೈಸಬೇಕೆ ಹೊರತು, ದೈಹಿಕ ತಿಳಿವಳಿಕೆ ಪದದ ಅರ್ಥದಲ್ಲಿ ಇರುವುದಿಲ್ಲ. ಇದು ಪ್ರತಿಯೊಂದು ಸ್ವರೂಪವನ್ನು ಕಸಿದುಕೊಳ್ಳುವುದನ್ನು ಒಳಗೊಳ್ಳುತ್ತದೆ. ಇದು ಆರ್ಥಿಕ ಅಥವಾ ಹಣಕಾಸನ್ನು ಕಸಿದುಕೊಳ್ಳುವಿಕೆಯನ್ನೂ ಸಹ ಒಳಗೊಳ್ಳುತ್ತದೆ.

ಈ ಸನ್ನಿವೇಶದಲ್ಲಿ ಕೌಟುಂಬಿಕ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಇಲ್ಲಿ ಅರ್ಜಿದಾರಳು

ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿರುವುದು ಸರಿಯಾದುದಲ್ಲ. ಅಷ್ಟೇ ಅಲ್ಲದೆ, ಕೌಟುಂಬಿಕ ನ್ಯಾಯಾಲಯವು, ಅವಳು ಪ್ರಾಪ್ತ ವಯಸ್ಕಳಾದ ನಂತರ ಪರಿಹಾರವನ್ನು ಕೋರಲು ಇಲ್ಲಿ ಅರ್ಜಿದಾರಳಿಗೆ ಸ್ವಾತಂತ್ರವನ್ನು ಕಾಯ್ದಿರಿಸಿರುವುದು ಸರಿಯಾಗಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 125(1)ನೇ ಪ್ರಕರಣವೇ ಸನ್ನಿವೇಶವನ್ನು ಪಾಲನೆಗೆ ತೆಗೆದುಕೊಳ್ಳಬೇಕು ಎನ್ನುವಾಗ, ಪ್ರಾಪ್ತ ವಯಸ್ಕಳಾಗಿರುವ ಮಗಳೂ ಕೂಡ, ಅವಳು ಕೆಲವು ಆಕಸ್ಮಿಕ ಘಟನೆಗಳ ಅಡಿಯಲ್ಲಿ ಅವಳು ವಿವಾಹವಾಗುವವರೆಗೆ ಅವಳ ತಂದೆಯು ನಿರ್ವಹಿಸಬೇಕು ಎಂಬುದಕ್ಕೆ ಹಕ್ಕುಳ್ಳವಳಾಗಿರುವಾಗ, ಕೌಟುಂಬಿಕ ನ್ಯಾಯಾಲಯವು, ಅವಳು ಪ್ರಾಪ್ತ ವಯಸ್ಕಳಾದ ನಂತರ ಅರ್ಜಿಯನ್ನು ಸಲ್ಲಿಸಬೇಕೆಂದು ಅರ್ಜಿದಾರಳಿಗೆ ನಿರ್ದೇಶಿಸಲಾಗಿರುವುದು ಅನಗತ್ಯವಾದುದಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 125(1) (ಸಿ) ಪ್ರಕರಣವು, ಸ್ಪಷ್ಟವಾಗಿ, ವಿವಾಹವಾಗಿರದ ಮಗಳನ್ನು ಒಳಗೊಂಡಂತೆ ಔರಸ ಅಥವಾ ಅನೌರಸ ಮಗುವು ಮತ್ತು ನಿರ್ವಹಿಸಲು ಪ್ರಾಪ್ತಳಾಗಿರುವ ಮಗುವು, ತಾನು ಯಾವುದೇ ದೈಹಿಕ ಅಥವಾ ಮಾನಸಿಕ ವಿಕಾರಗಳಿಂದ ಅಥವಾ ಮೇಲೆ ವಿವರಿಸಲಾದ ಅನ್ಯಾಯಕ್ಕೆ ಒಳಗಾಗಿರುವುದನ್ನು ರುಜುವಾತುಪಡಿಸಿದರೆ ಅವಳು ಹಕ್ಕುಳ್ಳವಳಾಗಿರುವಳು. ಆದುದರಿಂದ, ಗುಲ್ಬರ್ಗಾದ ಕೌಟುಂಬಿಕ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವನ್ನು ತಳ್ಳಿಹಾಕಲಾಗಿದ್ದು, ವಿಷಯವನ್ನು ಮೇಲೆ ಪರಿವೀಕ್ಷಿಸಲಾದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಗುಣಾರ್ಹತೆಯ ಮೇಲೆ ಅರ್ಜಿದಾರಳ ಪ್ರಕರಣವನ್ನು ಪರಿಗಣನೆಗಾಗಿ ಗುಲ್ಬರ್ಗಾದಲ್ಲಿರುವ ಕೌಟುಂಬಿಕ ನ್ಯಾಯಾಲಯಕ್ಕೆ ಕಳುಹಿಸಲಾಗಿದೆ.

ಅರ್ಜಿದಾರರ ಪರ : ಶ್ರೀ ಶರಣ್ಣು ಎಸ್. ಸರಡಗಿ, ವಕೀಲರು,
ಪ್ರತ್ಯರ್ಜಿದಾರರ ಪರ : ಶ್ರೀ ಸಂಜೀವ್ ಪಾಟೀಲ್, ವಕೀಲರು,

## ಆಜ್ಞೆ

**ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ:**

ಈ ಪುನರ್ ಪರಿಶೀಲನಾ ಅರ್ಜಿಯನ್ನು, ಅಂಗೀಕರಿಸುವುದಕ್ಕಾಗಿ ಪಟ್ಟಿ ಮಾಡಿದ್ದರೂ ಕೂಡ, ಎರಡೂ ಕಡೆಯ ಮಾನ್ಯ ವಕೀಲರ ಸಮ್ಮತಿಯ ಮೇರೆಗೆ ಇದನ್ನು ಅಂತಿಮವಾಗಿ ಆಲಿಸಲಾಗಿದೆ.

2. ಇಲ್ಲಿನ ಅರ್ಜಿದಾರರು, ದಿನಾಂಕ 06.08.2016ರ ಆದೇಶದ ಮೂಲಕ ಗುಲ್ಬರ್ಗಾದಲ್ಲಿರುವ ಕೌಟುಂಬಿಕ ನ್ಯಾಯಾಲಯವು, ಕ್ರಿಮಿನಲ್ ಸಂಕೀರ್ಣ ಸಂಖ್ಯೆ 80/2014ನ್ನು ವಜಾಗೊಳಿಸಿದ್ದರಿಂದ ಬಾಧಿತರಾಗಿದ್ದು, ಈ ಪುನರ್ ಪರಿಶೀಲನಾ ಅರ್ಜಿಯನ್ನು, ಸಲ್ಲಿಸಿರುತ್ತಾರೆ. ಇದನ್ನು ದಂಡ ಪ್ರಕ್ರಿಯಾ ಸಂಹಿತೆ 1973, (ದಂಡ ಪ್ರಕ್ರಿಯಾ ಸಂಹಿತೆ) 125ನೇ ಪ್ರಕರಣದ ಮೇರೆಗೆ ಸಲ್ಲಿಸಲಾಗಿದೆ.

3. ಸಂಕ್ಷಿಪ್ತವಾಗಿ ವಿವರಿಸಲಾದ ಸಂಗತಿಗಳು, ಹೀಗಿದ್ದು, ಇಲ್ಲಿನ ಎದುರುದಾರನು, ಅರ್ಜಿದಾರನ ತಂದೆಯಾಗಿರುವನೆಂದು ಹೇಳಲಾಗಿದೆ. ಅರ್ಜಿದಾರಳ ಪ್ರಕಾರ, ಎದುರುದಾರನು ಸುಮಾರು 19 ವರ್ಷಗಳ ಹಿಂದೆ ಅವಳ ತಾಯಿಯಾದ ಕಲ್ಲಮ್ಮಳನ್ನು ವಿವಾಹವಾಗಿದ್ದನು ಸದರಿ ವಿವಾಹ ಬಾಂಧವ್ಯದ ಕಾರಣದಿಂದಾಗಿ ದಿನಾಂಕ 12.10.1997ರಂದು ಅರ್ಜಿದಾರಳು ಜನಿಸಿರುತ್ತಾಳೆ. ಆ ಅರ್ಜಿದಾರರ ತಂದೆ ತಾಯಿಗಳು ಕಳೆದ ಹತ್ತು ವರ್ಷಗಳಿಂದ, ಹಾಗೇ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಅರ್ಜಿದಾರಳು, ಖಂದಾಲ್ ಗ್ರಾಮದಲ್ಲಿರುವ ಅವಳ ತಾಯಿಯ ಸಹೋದರಿಯಾದ ಗೌರಮ್ಮಳೊಂದಿಗೆ ಉಳಿದುಕೊಂಡಿದ್ದು, 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾಳೆ. ಇವಳು ಅಪ್ರಾಪ್ತಳಾಗಿದ್ದು, ಅವಳ ಚಿಕ್ಕಮ್ಮನಾದ ಗೌರಮ್ಮನ ಮೂಲಕ ಅರ್ಜಿಯನ್ನು ಸಲ್ಲಿಸಿದ್ದಳು. ಅರ್ಜಿದಾರಳು, ತನ್ನ ತಂದೆಯಾದ ಎದುರುದಾರನಿಂದ ಜೀವನಾಂಶವನ್ನು ಕೋರಿದ್ದು, ಅರ್ಜಿದಾರಳ ಪ್ರಕಾರ, ಅವಳು

ತನ್ನ ಇಬ್ಬರೂ ಪೋಷಕರಿಂದ ಬೇರ್ಪಟ್ಟಿರುವುದರಿಂದ, ಅವರು ವಿವಾಹವಾಗಿ ಮತ್ತೊಬ್ಬ ವ್ಯಕ್ತಿಯೊಂದಿಗೆ ಬದುಕುತ್ತಿರುವುದರಿಂದ ಮತ್ತು ಅವಳು ತನ್ನ ಚಿಕ್ಕಮ್ಮನ ಮನೆಯಲ್ಲಿ ವಾಸಿಸುತ್ತಿರುವುದರಿಂದ ಅವಳು ಜೀವನ ನಿರ್ವಹಣೆ ಮೂಲವನ್ನು ಹೊಂದಿರುವುದಿಲ್ಲ. ಅವಳು, ಎದುರುದಾರನು ಕೃಷಿಕನಾಗಿದ್ದು, ಚಿಂಚೋಳಿ ತಾಲೂಕಿನಲ್ಲಿರುವ ಮರ್ತೂರಿನಲ್ಲಿ ವಾಸಿಸುತ್ತಿರುವವನು ಎಂಬುದು ಅವಳ ವಾದವಾಗಿದೆ. ಅವನು ಸುಮಾರು 3 ಎಕರೆ 6 ಗುಂಟಾ ಜಮೀನನ್ನು ಹೊಂದಿದ್ದು, ಇತರ ಆದಾಯವನ್ನೂ ಸಹ ಹೊಂದಿದ್ದಾನೆ. ಅಲ್ಲದೆ, ಎದುರುದಾರನು ಶಬಮ್ಮ ಎಂಬ ಹೆಸರಿನ ಹೆಂಗಸಿನೊಂದಿಗೆ ಜೀವನ ನಡೆಸುತ್ತಿದ್ದಾನೆ. ಎದುರುದಾರನು ಅವಳನ್ನು ಮದುವೆಯಾಗಿರುವನೇ ಎಂಬುದು ತಿಳಿದುಬಂದಿರುವುದಿಲ್ಲ. ಇಂಥ ಸನ್ನಿವೇಶದಲ್ಲಿ, ಅರ್ಜಿದಾರಳು ಪ್ರತೀ ತಿಂಗಳು 5,000/- ರೂ.ಗಳ ಜೀವನಾಂಶವನ್ನು ಕೋರಿದ್ದಾಳೆ.

4. ಕೌಟುಂಬಿಕ ನ್ಯಾಯಾಲಯದ ಮುಂದೆ ಇಲ್ಲಿನ ಅರ್ಜಿದಾರಳು ಸಲ್ಲಿಸಿದ ಅರ್ಜಿಗೆ ಪ್ರತಿಕ್ರಿಯಿಸುತ್ತಾ, ಎದುರುದಾರನು ಹಾಜರಾಗಿ, ಆಕ್ಷೇಪಣೆಗಳನ್ನು ಸಲ್ಲಿಸಿದ್ದಾನೆ. ಎದುರುದಾರನು, ತಾನು ಅರ್ಜಿದಾರಳ ತಾಯಿಯನ್ನು ವಿವಾಹವಾಗಿರುವುದನ್ನು ಒಪ್ಪಿಕೊಂಡಿರುವುದಿಲ್ಲ ಅಥವಾ ಅವಳು ದಿನಾಂಕ 12.10.1997ರಂದು ಹುಟ್ಟಿರುವುದನ್ನು ಸಮ್ಮತಿಸಿಲ್ಲ. ಅರ್ಜಿಯ ಇತರ ದೃಢೋಕ್ತಿಗಳನ್ನು ನಿರಾಕರಿಸುವಾಗ, ಎದುರುದಾರನು, ತಾನು ದಿನಾಂಕ 01.06.1997ರಂದು ಕಲ್ಲವ್ವಳನ್ನು ಮರ್ತೂರು ಗ್ರಾಮದಲ್ಲಿರುವ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನದಲ್ಲಿ ವಿವಾಹವಾಗಿದ್ದೆನೆಂದು ವಾದಿಸಿದ್ದಾನೆ. ಅರ್ಜಿದಾರಳು 12.10.1997ರಂದು ಜನಿಸಿದ್ದಳು. ವಿವಾಹವಾದ ಕೇವಲ ನಾಲ್ಕು ತಿಂಗಳುಗಳ ನಂತರ ಅವಳು ಜನಿಸಿರುವುದರಿಂದ ಅರ್ಜಿದಾರಳ ತಾಯಿಯೊಂದಿಗೆ ಎದುರುದಾರನ ವಿವಾಹವಾಗದೆ ಎದುರುದಾರನಿಗೆ ಅರ್ಜಿದಾರಳು ಜನಿಸಿದ್ದಳು. ಇದಾದ ಸ್ವಲ್ಪದರಲ್ಲೇ ಎದುರುದಾರನಿಗೆ ತಿಳಿಸದೆ ಬೆಂಗಳೂರಿಗೆ ಬಂದಿದ್ದಾಳೆ. ಅವನು, ಅವಳನ್ನು ಹುಡುಕಾಡಿದ್ದು, ಅವಳು ಬೆಂಗಳೂರಿನ ಕಿಟ್ಟಿ ಎಂಬೊಬ್ಬನನ್ನು ವಿವಾಹವಾಗಿದ್ದು ಅವಳಿಗೆ ಇಬ್ಬರು ಮಕ್ಕಳಿರುವುದು ತಿಳಿದುಬಂದಿದೆ. ಆ ಕಲ್ಲವ್ವಳು ಎದುರುದಾರನ ಹೆಂಡತಿಯಲ್ಲವೆಂದು

ಮತ್ತು ಅರ್ಜಿದಾರಳು ಎದುರುದಾರನಿಗೆ ಜನಿಸಿಲ್ಲವೆಂಬುದಾಗಿದೆ. ಹೀಗಾಗಿ, ಎದುರುದಾರನ ಪ್ರಕಾರ, ಜೀವನಾಂಶವನ್ನು ಸಂದಾಯ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಅಷ್ಟೇ ಅಲ್ಲದೆ, ಎದುರುದಾರನು ತಾನು ಅವಿದ್ಯಾವಂತನಾಗಿದ್ದು, ಪ್ರತೀ ದಿನ 150/- ರೂ.ಗಳಿಂದ 200/- ರೂ.ಗಳ ವರೆಗಿನ ದರದಲ್ಲಿ ಕೂಲಿ ಕೆಲಸವನ್ನು ಮಾಡುವ ಮೂಲಕ ತನ್ನ ಹೊಟ್ಟೆ ಹೊರೆದು ಜೀವನ ಸಾಗಿಸುತ್ತಿರುವುದನ್ನು ದೃಢಪಡಿಸಿದ್ದಾನೆ. ಅವನು ತಾನು ಯಾವುದೇ ಜಮೀನು ಅಥವಾ ಮನೆ, ಆಸ್ತಿಯನ್ನು ಹೊಂದಿಲ್ಲವೆಂದು ತಿಳಿಸಿದ್ದಾನೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬಾರದೆಂದು ಮತ್ತು ಇದನ್ನು ಎದುರುದಾರನಿಗೆ ಕಿರುಕುಳ ನೀಡಲು ಸಲ್ಲಿಸಲಾಗಿದೆಯೆಂದು ತಿಳಿಸಲಾಗಿದೆ. ಆದುದರಿಂದ, ಎದುರುದಾರನು ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿದ್ದಾನೆ.

5. ಅವಳ ವಾದವನ್ನು ಸಮರ್ಥಿಸಿ, ಅರ್ಜಿದಾರಳು, ತಾನೇ ವಿಚಾರಣೆಗೊಳಗಾಗಿ, ಅವಳ ಪೋಷಕಳನ್ನು ಪ್ರಾ.ಸಾ.1 ಎಂದು ವಿಚಾರಣೆ ಮಾಡಿ, ಎಂಟು ದಸ್ತಾವೇಜುಗಳನ್ನು ಹಾಜರುಪಡಿಸಿದ್ದು ನಿಶಾನೆ ಪಿ.1 ರಿಂದ ಪಿ.8 ಎಂದು ಗುರುತು ಮಾಡಲಾಗಿದೆ. ಎದುರುದಾರನನ್ನು ಪ್ರತಿವಾದಿ ಸಾಕ್ಷ್ಯ 1 ಎಂದು ಮತ್ತು ಮತ್ತೊಬ್ಬ ಸಾಕ್ಷಿದಾರರನ್ನು ಪ್ರಾ.ಸಾ.2 ಎಂದು ವಿಚಾರಣೆಗೊಳಪಡಿಸಲಾಗಿ ಎದುರುದಾರನು, ನಿಶಾನೆ ಡಿ.1 ಎಂದು ಗುರುತು ಹಾಕಲಾದ ದಸ್ತಾವೇಜೊಂದನ್ನು ಹಾಜರುಪಡಿಸಿರುತ್ತಾನೆ.

6. ದಾಖಲೆಯಲ್ಲಿರುವ ಸಾಕ್ಷ್ಯದ ಆಧಾರದ ಮೇಲೆ, ಕೌಟುಂಬಿಕ ನ್ಯಾಯಾಲಯವು, ತನ್ನ ಪರಿಗಣನೆಗಾಗಿ ಈ ಮುಂದಿನ ವಿವಾದಾಂಶಗಳನ್ನು ಎತ್ತಿದ್ದು, ಹೀಗಿವೆ:

> 1. ಅರ್ಜಿದಾರಳು, ಸಾಕಷ್ಟು ಸ್ಥಿತಿವಂತನಾಗಿದ್ದರೂ ಅರ್ಜಿದಾರಳನ್ನು ನಿರ್ವಹಿಸಲು ಎದುರುದಾರನು ಉದಾಸೀನ ಮಾಡಿರುವನು ಎಂಬುದನ್ನು ರುಜುವಾತುಪಡಿಸಿದ್ದಾಳೆಯೇ?

2. ಅರ್ಜಿದಾರಳು ಜೀವನಾಂಶಕ್ಕೆ ಹಕ್ಕುಳ್ಳವಳಾಗಿರುವಳೇ? ಹಾಗಿದ್ದರೆ ಪ್ರಮಾಣವೆಷ್ಟು?

7. ಕೌಟುಂಬಿಕ ನ್ಯಾಯಾಲಯವು, ಎರಡೂ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಿದ್ದು, ಅವಳು ಪ್ರಾಪ್ತಳಾದ ಮೇಲೆ ಅವಳ ಜೀವನಾಂಶದ ಪರಿಹಾರವನ್ನು ಕೋರಲು ಅರ್ಜಿದಾರಳಿಗೆ ಸ್ವಾತಂತ್ರ್ಯವನ್ನು ಕಾಯ್ದಿರಿಸಿ ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯನ್ನು ವಜಾಗೊಳಿಸಿದೆ. ಅರ್ಜಿಯನ್ನು ವಜಾಗೊಳಿಸಿದ್ದರಿಂದ ಬಾಧಕಳಾಗಿರುವ ಕೌಟುಂಬಿಕ ನ್ಯಾಯಾಲಯದ ಮುಂದಿದ್ದ ಅರ್ಜಿದಾರಳು ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದ್ದಾಳೆ.

8. ನಾನು ಅರ್ಜಿದಾರಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ಮತ್ತು ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವನ್ನು ಆಲಿಸಿದ್ದು ದಾಖಲೆಯಲ್ಲಿರುವ ಸಾಕ್ಷ್ಯಾಧಾರವನ್ನು ಅವಗಾಹನೆ ಮಾಡಿರುತ್ತೇನೆ.

9. ಅರ್ಜಿದಾರಳ ವಕೀಲರು, ಕೌಟುಂಬಿಕ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗಿನ ಜೀವನಾಂಶಕ್ಕೆ ಅರ್ಜಿದಾರಳು ಹಕ್ಕುಳ್ಳವಳಾಗಿದ್ದಾಳೆಯೇ ಎಂಬುದನ್ನು ಸ್ಪಷ್ಟಪಡಿಸದೆ ಅರ್ಜಿಯನ್ನು ವಜಾಗೊಳಿಸಬಾರದಾಗಿತ್ತು ಎಂದು ನಿವೇದಿಸಿದ್ದಾರೆ. ಅವರು ವ್ಯಕ್ತಿಯ ಅನೌರಸ ಮಗು ಅದರಲ್ಲೂ ನಿರ್ದಿಷ್ಟವಾಗಿ ಹೆಣ್ಣುಮಗಳು, ವಿವಾಹವಾಗದಿದ್ದರೆ, ಯಾವುದೇ ದೈಹಿಕ ಅಥವಾ ಮಾನಸಿಕ ವಿಕೃತಿ ಅಥವಾ 'ಗಾಯ'ಗಳಾಗಿರುವ ಕಾರಣದಿಂದ ಅವಳನ್ನು ನಿರ್ವಹಿಸಿಕೊಳ್ಳಲು ಅಸಮರ್ಥಳಾಗಿದ್ದರೆ ಪ್ರಾಪ್ತಳಾದ ನಂತರವೂ ಕೂಡ ಜೀವನಾಂಶಕ್ಕೆ ಹಕ್ಕುಳ್ಳವಳಾಗಿರುವಳು ಎಂದು ವಾದಿಸಲು ಸದರಿ ಉಪಬಂಧದ ಕಡೆಗೆ ನಮ್ಮ ಗಮನವನ್ನು ಸೆಳೆದಿರುವರು. ಅವರು, ಇಲ್ಲಿ ಅರ್ಜಿದಾರಳ ಪ್ರಕರಣವು, 'ಅನ್ಯಾಯವಾಗಿರುವುದು' ಎಂಬ ಪದಾವಳಿಯ ವ್ಯಾಪ್ತಿಯೊಳಗೆ ಬರುತ್ತದೆಂದು ವಾದಿಸಿದ್ದಾರೆ. ಅವರು, ಅರ್ಜಿದಾರಳು ತಾನು ಎದುರುದಾರಳ ಮಗಳಾಗಿರುವಳೆಂಬುದನ್ನು ರುಜುವಾತುಪಡಿಸಲು ಸಾಕ್ಷ್ಯದಲ್ಲಿ ನೀಡಿರುವಳು, ಆದುದರಿಂದ, ಕೌಟುಂಬಿಕ

ನ್ಯಾಯಾಲಯವು, ಅವಳ ಪಿತೃತ್ವವು ಸಂದೇಹಾಸ್ಪದವಾಗಿದೆಯೆಂದು ಅಭಿಪ್ರಾಯಪಡಬಾರದಾಗಿತ್ತು ಎಂದು ನಿವೇದಿಸಿರುವರು. ಅಷ್ಟೇ ಅಲ್ಲದೆ, ಅರ್ಜಿದಾರಳ ವಕೀಲರ ಪ್ರಕಾರ, ಅನೌರಸ ವಿವಾಹವಾಗಿರದ ಹೆಣ್ಣು ಮಗುವು, ಅವಳು ಯಾವುದೇ ನೋವಿನಿಂದ ನರಳುತ್ತಿದ್ದರೆ, ತನ್ನ ಜೀವನವನ್ನು ನಿರ್ವಹಿಸಲು ಅಸಮರ್ಥಳಾಗಿದ್ದರೆ, ಪ್ರಾಪ್ತಳಾದ ನಂತರವೂ ಕೂಡ ಜೀವನಾಂಶಕ್ಕೆ ಹಕ್ಕುಳ್ಳವಳಾಗಿರುವಳು. ಅರ್ಜಿದಾರಳ ವಕೀಲರು, ಪ್ರಸ್ತುತ ಪ್ರಕರಣದಲ್ಲಿ, ಅರ್ಜಿದಾರಳು, ಅವಳ ತಾಯಿ ಕಲ್ಲವ್ವಳನ್ನು ಎದುರುದಾರನು ವಿವಾಹವಾದ ನಂತರ ಜನಿಸಿದ್ದಳು ಮತ್ತು ಅರ್ಜಿದಾರಳು ಹಾಜರುಪಡಿಸಿದ ದಸ್ತಾವೇಜುಗಳು, ಎದುರುದಾರನು ಅವಳ ತಂದೆಯಾಗಿರುವನು ಎಂಬುದನ್ನು ಸಾಬೀತುಪಡಿಸುತ್ತವೆ ಎಂದು ವಾದಿಸಿದ್ದಾರೆ. ಮಾನ್ಯ ವಕೀಲರು, ಎದುರುದಾರನು, ಅರ್ಜಿದಾರಳು ನೀಡಿದ ಸಾಕ್ಷ್ಯಕ್ಕೆ ವಿರುದ್ಧವಾದ ಯಾವುದೇ ಸಾಕ್ಷ್ಯವನ್ನು, ನೀಡಿಲ್ಲವೆಂದು ಅರ್ಜಿದಾರಳನ್ನು ತಂದೆ ಮತ್ತು ತಾಯಿ ಕಲ್ಲವ್ವ ಇಬ್ಬರೂ ಪರಿತ್ಯಜಿಸಿರುವರೆಂದು ನಿವೇದಿಸಿದ್ದಾರೆ. ಅವಳು ತನ್ನ ಚಿಕ್ಕಮ್ಮನಾದ ಗೌರಮ್ಮ ಎಂಬುವರೊಟ್ಟಿಗೆ ವಾಸಿಸುತ್ತಿರುವಳು. ಈ ಸಂದರ್ಭದಲ್ಲಿ, ಅವಳು ಜೀವನಾಂಶವನ್ನು ಕೋರಲು ಹಕ್ಕುಳ್ಳವಳಾಗಿದ್ದಳು ಮತ್ತು ಹಕ್ಕುಳ್ಳವಳಾಗಿರುತ್ತಾಳೆ. ಅರ್ಜಿದಾರಳ ವಕೀಲರು, 'ಅನ್ಯಾಯವಾಗಿರುವುದು' ಎಂಬ ಪದಾವಳಿಯನ್ನು, ಅರ್ಜಿದಾರಳನ್ನು ಸದರಿ ಪದಾವಳಿಯಲ್ಲಿ ಇಡುವ ರೀತಿಯಲ್ಲಿ ಸಂದರ್ಭವನ್ನು ತರುವಲ್ಲಿ ವ್ಯಾಖ್ಯಾನಿಸಬೇಕು, ಎಂದು ಹಾಗೆಯೇ ವಿಷಯವನ್ನು ಹಿಂದಕ್ಕೆ ಕಳುಹಿಸುವುದಕ್ಕೆ ಸಂಬಂಧಪಟ್ಟಂತೆ ಸಾಕ್ಷ್ಯವನ್ನು ದಾಖಲಿಸಿದ ನಂತರ ಅವಳಿಗೆ ಜೀವನಾಂಶವನ್ನು ಮಂಜೂರುಮಾಡಲು ಮುಂದಾಗಬಹುದಾಗಿತ್ತೆಂದು ನಿವೇದಿಸಿದ್ದಾರೆ.

10. ಇದಕ್ಕೆ ವಿರುದ್ಧವಾಗಿ, ಎದುರುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಅರ್ಜಿದಾರಳು, ಎದುರುದಾರರ ಮಗಳಾಗಿಲ್ಲದಿರುವುದರಿಂದ ಪ್ರಶ್ನಿತ ಆದೇಶವು ಯಾವುದೇ ಹಸ್ತಕ್ಷೇಪವನ್ನು ಕೋರುವುದಿಲ್ಲವೆಂದು ನಿವೇದಿಸಿದ್ದಾರೆ. ಅಲ್ಲದೆ, ಎದುರುದಾರನು, ಯಾರೋ ಅಪರಿಚಿತರನ್ನು ನಿರ್ವಹಿಸಲು ಜವಾಬ್ದಾರನಾಗುವುದಿಲ್ಲವೆಂದು ಮತ್ತು ಕೌಟುಂಬಿಕ ನ್ಯಾಯಾಲಯವು, ದಂಡ

ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯನ್ನು ವಜಾಗೊಳಿಸಿರುವುದು ಸರಿಯಾಗಿತ್ತೆಂದು ನಿವೇದಿಸಿದ್ದಾರೆ. ಅಂಥ ಅರ್ಜಿಯನ್ನು ವಜಾಗೊಳಿಸಿದಾಗ ಅವಳು ಪ್ರಾಪ್ತಳಾದಾಗ ಎದುರುದಾರನಿಗೆ ಯಾವುದೇ ಅರ್ಜಿಯನ್ನು ಸಲ್ಲಿಸಲು ಅರ್ಜಿದಾರಳಿಗೆ ಸ್ವಾತಂತ್ರ್ಯವನ್ನು ಕಾಯ್ದಿರಿಸಿರಲಿಲ್ಲವೆಂದು ನಿವೇದಿಸಿದ್ದಾರೆ.

11. ಎರಡೂ ಪಕ್ಷಕಾರರ ವಕೀಲರ ವಾದಗಳನ್ನು ಆಲಿಸಿ, ದಾಖಲೆಯಲ್ಲಿರುವ ಸಾಕ್ಷ್ಯವನ್ನು ಅವಗಾಹಿಸಿದ ನಂತರ, ಅರ್ಜಿದಾರಳು, ಎದುರುದಾರನ ಜೊತೆಯಾಗಲಿ ಅಥವಾ ಅವಳ ತಾಯಿ ಕಲ್ಲವ್ವನೊಂದಿಗಾಗಲಿ ವಾಸಿಸುತ್ತಿಲ್ಲವೆಂಬುದನ್ನು ಗಮನಿಸಲಾಗಿದೆ. ಆದಾಗ್ಯೂ ಅರ್ಜಿದಾರಳು, ತಾನು ಎದುರುದಾರನ ಮಗಳಾಗಿರುವುದನ್ನು ರುಜುವಾತುಪಡಿಸಲು ಸಮರ್ಥಳಾಗಿದ್ದಾಳೆ. ನಿಶಾನೆ ಪಿ.1 ರಿಂದ ಪಿ.7ರ ವರೆಗಿನ ರೂಪದಲ್ಲಿ ಅವಳು ಹಾಜರುಪಡಿಸಿದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯದಿಂದ ಇದು ವ್ಯಕ್ತವಾಗುತ್ತದೆ. ವಾಸ್ತವವಾಗಿ, ಕೌಟುಂಬಿಕ ನ್ಯಾಯಾಲಯವು, ಅರ್ಜಿದಾರಳು, ತಾನು ಎದುರುದಾರಳ ಮಗಳಾಗಿರುವೆನು ಎಂಬುದನ್ನು ರುಜುವಾತುಪಡಿಸಿಲ್ಲವೆಂಬುದನ್ನು ಒಂದು ಕಡೆಯಿಂದ ಗಮನಿಸಿದೆ, ಆದರೆ, ಅದೇ ಸಮಯದಲ್ಲಿ ಕೌಟುಂಬಿಕ ನ್ಯಾಯಾಲಯವು, ಅವಳು ಪ್ರಾಪ್ತವಯಸ್ಕಳಾದ ಮೇಲೆ ಜೀವನಾಂಶವನ್ನು ಕೋರಲು ಅವಳಿಗೆ ಸ್ವಾತಂತ್ರ್ಯವನ್ನು ಸಹ ನೀಡಿದೆ. ಸ್ಪಷ್ಟವಾಗಿ, ಎದುರುದಾರನಿಂದ ಮಾತ್ರ ಜೀವನಾಂಶವನ್ನು ಕೋರುವ ಸದರಿ ಸ್ವಾತಂತ್ರ್ಯವನ್ನು ನೀಡಿದೆಯೇ ಹೊರತು ಬೇರೆ ಯಾರೊಬ್ಬರಿಂದಲೂ ಅಲ್ಲ. ಆದುದರಿಂದ ಆ ದೃಷ್ಟಿಕೋನದಲ್ಲಿ, ಕೌಟುಂಬಿಕ ನ್ಯಾಯಾಲಯವು, ಅವಳು ಎದುರುದಾರನ ಮಗಳಲ್ಲವೆಂದು ಒಂದು ಕಡೆಯಿಂದ ಅಭಿಪ್ರಾಯಪಟ್ಟರೆ, ಅದೇ ಸಮಯದಲ್ಲಿ, ಎದುರುದಾರನ ಪ್ರತಿಯಾಗಿ ಮಾತ್ರ ಇರಬಹುದಾದ ಪ್ರಾಪ್ತ ವಯಸ್ಕಳಾದ ಮೇಲೆ ಪರಿಹಾರವನ್ನು ಕೋರಲು ಅರ್ಜಿದಾರಳಿಗೆ ಸ್ವಾತಂತ್ರ್ಯವನ್ನು ಕಾಯ್ದಿರಿಸಿ, ಅದು ಸ್ವತಃ ತಾನೇ ತಪ್ಪಾಗಿ ಮಾರ್ಗದರ್ಶನ ಮಾಡಿದೆ.

12. ಅಷ್ಟೇ ಅಲ್ಲದೆ, ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಓದುವಿಕೆಯು, ಅದು ಪತ್ನಿಯನ್ನು ಮಾತ್ರ ಒಳಗೊಳ್ಳದ ವ್ಯಾಪಕ ಅರ್ಥ ಹೊಂದಿದೆ

ಎಂಬುದನ್ನು, ಅವಳೇ ನಿರ್ವಹಿಸಿಕೊಳ್ಳಲಾಗದ ವ್ಯಕ್ತಿಯ ಔರಸ ಅಥವಾ ಅನೌರಸ ಅಪ್ರಾಪ್ತ ಮಗು, ಅದು ವಿವಾಹವಾಗಿರಲಿ ಅಥವಾ ಇಲ್ಲದಿರಲಿ ತಾನೇ ನಿರ್ವಹಿಸಿಕೊಳ್ಳಲು ಸಾಧ್ಯವಾಗದ ಅಥವಾ ಪ್ರಾಪ್ತ ವಯಸ್ಸಿಗೆ ಬಂದಿರುವ ಅವನ ಔರಸ ಅಥವಾ ಅನೌರಸ ಮಗು (ವಿವಾಹಿತ ಹೆಣ್ಣುಮಗಳಾಗಿಲ್ಲದಿರುವ) ಅಂಥ ಮಗು, ಯಾವುದೇ ದೈಹಿಕ ಅಥವಾ ಮಾನಸಿಕ ವಿಕಾರದ ಕಾರಣದಿಂದ ಅಥವಾ ತಾನೇ ನಿರ್ವಹಿಸಿಕೊಳ್ಳಲು ಅಸಮರ್ಥವಾದ ಅನ್ಯಾಯಕ್ಕೊಳಗಾಗಿದ್ದಲ್ಲಿ ಅಥವಾ ವ್ಯಕ್ತಿಯ ತಂದೆ ಅಥವಾ ತಾಯಿ, ಅವನನ್ನು ನಿರ್ವಹಿಸಲಾಗದಿದ್ದಲ್ಲಿ, ಅವನೇ ಅಥವಾ ಅವಳೇ ನಿರ್ವಹಿಸಲು ಅಸಮರ್ಥರಾದಲ್ಲಿ ಇದರಲ್ಲಿ ಒಳಗೊಳ್ಳುವ ವ್ಯಾಪಕತೆಯಿರುತ್ತದೆಯೆಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಎಲ್ಲಾ ವ್ಯಕ್ತಿಗಳನ್ನು ಈ ರೀತಿಯಲ್ಲಿ, ವ್ಯಕ್ತಿಯ ಅವಲಂಬಿತರಾಗುವರೆಂದು ಪರಿಗಣಿಸಲಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 125(1)ನೇ ಪ್ರಕರಣದ ಮೇರೆಗೆ, ಪತ್ನಿಯು ಮಾತ್ರ ಅವಳ ಗಂಡನ ವಿರುದ್ಧ ಜೀವನಾಂಶವನ್ನು ಕೋರಬಹುದಾಗಿದೆ, ಇದು ವಿಪರ್ಯಯವಾಗಿರುವುದಿಲ್ಲ ಎಂಬುದನ್ನು ಗಮನಿಸುವುದು ಮಹತ್ವಪೂರ್ಣವಾದುದಾಗಿದೆ. ತಕ್ಷಣದ ಪರಾಮರ್ಶೆಗಾಗಿ ದಂಡ ಪ್ರಕ್ರಿಯಾ ಸಂಹಿತೆಯ 125(1) (ಸಿ) ಪ್ರಕರಣವನ್ನು ಈ ಕೆಳಗೆ ಉದ್ಧೃತಗೊಳಿಸಲಾಗಿದೆ.

> "125. ಪತ್ನಿಯರು, ಮಕ್ಕಳು, ಪೋಷಕರ ಜೀವನಾಂಶ ಆದೇಶ –
>
> *(1) ಸಾಕಷ್ಟು ಸಂಪಾದನೆಯಿರುವ ಯಾರೇ ವ್ಯಕ್ತಿಯು.–*
>
> *ನಿರ್ಲಕ್ಷ್ಯ ಮಾಡಿದರೆ ಅಥವಾ ಸಂರಕ್ಷಿಸಲು ತಿರಸ್ಕರಿಸಿದರೆ.*
>
> *"(ಸಿ) ತನ್ನ ವಿಧಿಸಮ್ಮತ ಅಥವಾ ವಿಧಿಸಮ್ಮತವಲ್ಲದ (ವಿವಾಹಿತ ಪುತ್ರಿಯಲ್ಲದ) ಪ್ರಾಪ್ತ ವಯಸ್ಕ ಮಗುವು ಯಾವುದೇ ದೈಹಿಕ ಅಥವಾ ಮಾನಸಿಕ ವಿಕಲತೆ ಅಥವಾ ಕ್ಷತಿಯ ಕಾರಣದಿಂದಾಗಿ ತನ್ನನ್ನು ತಾನು ಸಂರಕ್ಷಿಸಿಕೊಳ್ಳಲು ಅಸಮರ್ಥವಾಗಿರುವಲ್ಲಿ, ಅಂತಹ ಮಗುವನ್ನು; ಅಥವಾ" –*

13. ಈ ಪ್ರಕರಣದಲ್ಲಿ ಪರಿಗಣಿಸಬೇಕಾದ ಅಂಶ ಯಾವುದೆಂದರೆ, ಅರ್ಜಿದಾರಳು, ಎದುರುದಾರನ ಔರಸ ಪುತ್ರಿಯಾಗಿದ್ದಾಳೆಯೇ ಅಥವಾ ಅನೌರಸ ಪುತ್ರಿಯಾಗಿದ್ದಾಳೆಯೇ ಎಂಬುದಾಗಿದೆ ಮತ್ತು ಅವಳು ವಿವಾಹಿತ ಮಗಳಾಗಿಲ್ಲ ಎಂಬುದಾಗಿದ್ದು, ಅವಳು, ಜೀವನಾಂಶಕ್ಕೆ ಹಕ್ಕುಳ್ಳವಳಾಗಿರುತ್ತಾಳೆ, ಅವಳು ಅಪ್ರಾಪ್ತಳಾಗಿದ್ದಾಗ ಆ ಅವಧಿಯಲ್ಲಿ ಮಾತ್ರ ಆಗಿರಲಿಲ್ಲ, ಎಂಬುದಲ್ಲ, ಆದರೆ ಪ್ರಾಪ್ತಳಾದ ನಂತರವೂ ಕೂಡ, ಅವಳನ್ನು ನಿರ್ವಹಿಸಿಕೊಳ್ಳಲು ಅಸಮರ್ಥಳಾಗಿ ನೋವಾಗಿರುವ ಕಾರಣದಿಂದ ಅವಳು ವಿವಾಹವಾಗುವತನಕ ಹಕ್ಕುಳ್ಳವಳಾಗಿರುತ್ತಾಳೆ. ಅರ್ಜಿದಾರಳಿಗೆ ಈಗಾಗಲೇ ಹದಿನೇಳು ವರ್ಷ ವಯಸ್ಸಾಗಿದ್ದು, 2014ನೇ ವರ್ಷದಲ್ಲಿ ಅರ್ಜಿಯನ್ನು ಸಲ್ಲಿಸುವಾಗ ಹದಿನೇಳಾಗಿದ್ದು, ಅರ್ಜಿಯನ್ನು ವಿಲೆ ಮಾಡುವಾಗ, ಬಹುತೇಕ ಅವಳಿಗೆ ಹದಿನೆಂಟು ವರ್ಷ ವಯಸ್ಸಾಗಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಕೌಟುಂಬಿಕ ನ್ಯಾಯಾಲಯವು ಎರಡು ರೀತಿಯಲ್ಲಿ ತಪ್ಪೆಸಗಿದೆ, ಮೊದಲನೆಯದಾಗಿ, ದಂಡ ಪ್ರಕ್ರಿಯಾ ಸಂಹಿತೆಯ 125(1)(ಬಿ) ಪ್ರಕರಣದ ಮೇರೆಗೆ ಅರ್ಜಿದಾರಳು ಅಪ್ರಾಪ್ತಳಾಗಿರುವ ಅವಧಿಯಲ್ಲಿ ಅರ್ಜಿದಾರಳಿಗೆ ಯಾವುದೇ ಜೀವನಾಂಶವನ್ನು ನೀಡದಿರುವ ಮೂಲಕ ಮತ್ತು ಎರಡನೆಯದಾಗಿ, ಅರ್ಜಿದಾರಳು ಪ್ರಾಪ್ತಳಾದ ನಂತರದ ಅವಧಿಗೆ ದಂಡ ಪ್ರಕ್ರಿಯಾ ಸಂಹಿತೆಯ 125(1)(ಸಿ) ಪ್ರಕರಣವನ್ನು ಅನ್ವಯಿಸದೆ, ಇರುವ ಮೂಲಕ ಎರಡು ತಪ್ಪೆಸಗಿದೆ.

14. "ವಿವಾಹವಾಗದಿರುವ ಮಗಳು" ಎಂಬ ಪದಾವಳಿಯು ಔರಸ ಅಥವಾ ಅನೌರಸ ಮಗಳಾಗಿದ್ದು ಅವಳು ಪ್ರಾಪ್ತ ವಯಸ್ಕಳಾಗಿದ್ದರೂ ಅವಳು ವಿವಾಹವಾಗುವವರೆಗೆ ಜೀವನಾಂಶವನ್ನು ಪಡೆಯಲು ಹಕ್ಕುಳ್ಳವಳಾಗಿರುವರು ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಆದರೆ, ಅವಳಿಗೆ ಆದ ಯಾವುದೇ ದೈಹಿಕ ಅಥವಾ ಮಾನಸಿಕ ವಿಕಾರತೆಯ ಕಾರಣದಿಂದ ಅಥವಾ ಆ ಸಲುವಾಗಿ, ಅವಳು ಪ್ರಾಪ್ತ ವಯಸ್ಕಳಾಗಿದ್ದರೂ ಅವಳನ್ನು ನಿರ್ವಹಿಸಿಕೊಳ್ಳಲು ಮಗಳು ಅಸಮರ್ಥಳಾಗಿರುವ ಕಾರಣದಿಂದ ಹಕ್ಕುಳ್ಳವಳಾಗಿರುತ್ತಾಳೆ. ಪ್ರಾಪ್ತ ವಯಸ್ಕಳಾದ ಎಲ್ಲಾ ರೀತಿಯಲ್ಲೂ ಮಗಳಾಗಿರುವ ಸಂದರ್ಭದಲ್ಲಿ ರುಜುವಾತು ಪಡಿಸಬೇಕಾಗಿರುವುದು ಯಾವುದೆಂದರೆ, ಯಾವುದೇ ದೈಹಿಕ ಅಥವಾ ಮಾನಸಿಕ

ವಿಕಾರತೆ ಅಥವಾ ಅನ್ಯಾಯಕ್ಕೊಳಗಾಗಿರುವ ಕಾರಣದಿಂದ ಅವಳನ್ನು ನಿರ್ವಹಿಸಿಕೊಳ್ಳಲು ಅಸಮರ್ಥಳಾಗಿರುವ ಕಾರಣದಿಂದ ಉದಾಸೀನ ಮಾಡಲಾಗಿದೆ ಅಥವಾ ತನ್ನನ್ನು ನಿರ್ವಹಿಸಲು ಅವಳ ತಂದೆಯು ನಿರಾಕರಿಸಿರುವನು ಎಂಬುದನ್ನು ರುಜುವಾತುಪಡಿಸಬೇಕು.

15. ಬ್ಲಾಕ್‌ನ ಕಾನೂನು ನಿಘಂಟುವಿನ, ಒಂಬತ್ತನೇ ಆವೃತ್ತಿಯ ಪ್ರಕಾರ, 'ಅನ್ಯಾಯವಾಗಿರುವುದು' ಎಂಬ ಪದಾವಳಿಯು, ದೋಷಯುಕ್ತ ಅಥವಾ ಮತ್ತೊಬ್ಬರ ಕಾನೂನು ಹಕ್ಕನ್ನು ಉಲ್ಲಂಘಿಸುತ್ತದೆ ಇದಕ್ಕಾಗಿ, ಕಾನೂನು ಪರಿಹಾರವನ್ನು ಉಪಬಂಧಿಸಿದೆ. ದೋಷ ಎಂಬುದನ್ನು ಸುದೀರ್ಘ ತಿಳಿವಳಿಕೆಯಿಂದ, ವಿವರಿಸಬಹುದಾಗಿದೆ. ಹೊಣೆಗಾರಿಕೆಗೆ ಪ್ರಶ್ನೆ ಉದ್ಭವಿಸುವುದಕ್ಕೆ ಉತ್ತರ ನೀಡುವಷ್ಟರ ಮಟ್ಟಿಗೆ ಯಾವುದನ್ನೇ ಆಗಲಿ ಮಾಡಿದ ಅಥವಾ ಚ್ಯುತಿಗೊಳಿಸಲಾದಂತೆ ಕಾನೂನು ಕರ್ತವ್ಯಕ್ಕೆ ವಿರುದ್ಧವಾಗಿ ಮಾಡುವುದು. ಹೀಗಾಗಿ, ಲೋಪವೆಂದರೆ ಹಕ್ಕು ಮತ್ತು ನ್ಯಾಯದ ನಿಯಮಕ್ಕೆ ವಿರುದ್ಧವಾದ ಕೃತ್ಯವೆಸಗುವುದು. ಈ ಅನ್ಯಾಯದ ಪರ್ಯಾಯವು ಇದರ ಸತ್ಯವಾದ ಮತ್ತು ಕ್ಷತಿಯ ಪ್ರಾಥಮಿಕ ಜ್ಞಾನದಲ್ಲಿದೆ (ನ್ಯಾಯಕ್ಕೆ ವಿರುದ್ಧವಾಗಿರುವುದು). ಹೀಗಾಗಿ, ಕಾನೂನು ಹಕ್ಕಿನ ಕಾನೂನು ಅನ್ಯಾಯ ಅಥವಾ ಉಲ್ಲಂಘನೆ ಎಂಬ ಅರ್ಥವು ಒಪ್ಪಿತವಾದುದಾಗಿದ್ದು, ಇದು ನ್ಯಾಯಸಮ್ಮತವಲ್ಲದ ವ್ಯವಹಾರಗಳಿಗೆ ಕಾರಣವಾಗುತ್ತದೆ.

16. ಪ್ರಸ್ತುತ ಪ್ರಕರಣದಲ್ಲಿ, ಅರ್ಜಿದಾರಳು, ಯಾವುದೇ ದೈಹಿಕ ಅಥವಾ ಮಾನಸಿಕ ವಿಕಾರಗಳಿಗೆ ತುತ್ತಾಗಿಲ್ಲ. ಆದರೆ ಅರ್ಜಿದಾರಳು ಸತ್ಯವಾಗಿ, ಅನ್ಯಾಯಕ್ಕೆ ಒಳಗಾಗಿದ್ದು, ಈ ಕಾರಣದಿಂದ, ಅವಳು ತನ್ನನ್ನು ನಿರ್ವಹಿಸಿಕೊಳ್ಳಲು ಸಮರ್ಥಳಾಗಿಲ್ಲ. ನನ್ನ ದೃಷ್ಟಿಯಲ್ಲಿ 'ಅನ್ಯಾಯ' ಎಂಬ ಪದವನ್ನು ದೈಹಿಕ ಅಥವಾ ಮಾನಸಿಕ ವಿಕಾರಕ್ಕೆ ಸೀಮಿತಗೊಳಿಸಲಾಗುವುದಿಲ್ಲ. ಸಂಸತ್ತು, ಅನ್ಯಾಯ ಎಂಬ ಪದವನ್ನು ದೈಹಿಕ ಅಥವಾ ಮಾನಸಿಕ ವಿಕಾರತೆಯನ್ನು ಹೊರತುಪಡಿಸಿದ ಮತ್ತೊಂದು ಅರ್ಥ ನೀಡುತ್ತದೆಯೆಂದು ವಿವೇಚನಾಯುಕ್ತವಾಗಿ ಬಳಸಿದೆ. ಅನ್ಯಾಯ ಎಂಬ ಪದವನ್ನು ವಿಶಾಲಾರ್ಥದಲ್ಲಿ ವ್ಯಾಖ್ಯಾನ ಮಾಡಲೇಬೇಕು, ಆ ಸಲುವಾಗಿಯೇ

ಅದರ ಉದ್ದೇಶ ಮತ್ತು ಸಂಕಲ್ಪವನ್ನು ವರ್ಧಿಸಲಾಗಿದ್ದು, ವಕ್ರದೃಷ್ಟಿಯಲ್ಲಿ ಅರ್ಥೈಸುವುದಲ್ಲ. ಅನ್ಯಾಯ ಎಂಬ ಪದವನ್ನು ಕಾನೂನಿನ ತಿಳಿವಳಿಕೆಯಲ್ಲಿ ಅರ್ಥೈಸಬೇಕೆ ಹೊರತು, ದೈಹಿಕ ತಿಳಿವಳಿಕೆ ಪದದ ಅರ್ಥದಲ್ಲಿ ಇರುವುದಿಲ್ಲ. ಇದು ಪ್ರತಿಯೊಂದು ಸ್ವರೂಪವನ್ನು ಕಸಿದುಕೊಳ್ಳುವುದನ್ನು ಒಳಗೊಳ್ಳುತ್ತದೆ. ಇದು ಆರ್ಥಿಕ ಅಥವಾ ಹಣಕಾಸನ್ನು ಕಸಿದುಕೊಳ್ಳುವಿಕೆಯನ್ನೂ ಸಹ ಒಳಗೊಳ್ಳುತ್ತದೆ.

17. ಇಲ್ಲಿನ ಅರ್ಜಿದಾರಳು ಅವಳ ಇಬ್ಬರೂ ಪೋಷಕರಿಂದ ಪ್ರತ್ಯೇಕಗೊಂಡಿರುವಳು ಎಂಬುದು ಸಂಗತಿಯಾಗಿದ್ದು, ಅರ್ಜಿದಾರಳಿಗೆ ಆಗಿರುವ ಅನ್ಯಾಯದ ನಿದರ್ಶನವಾಗಿದೆ. ಅಷ್ಟೇ ಅಲ್ಲದೆ, ಅವಳ ಈ ಬೇರ್ಪಡುವಿಕೆಯು ಹಣಕಾಸಿನಿಂದ ವಂಚಿತಗೊಳಿಸಿದ್ದು, ಅವಳ ಸುಭದ್ರ ಜೀವನ ನಷ್ಟವಾಗಿದೆ. ಪ್ರಸ್ತುತ ಪ್ರಕರಣದಲ್ಲಿ, ಅರ್ಜಿದಾರಳೇ ಸ್ವತಃ ಜೀವನಾಂಶವನ್ನು ಕೋರಿರುವುದು ಅವಳ ಆರ್ಥಿಕ ಅಥವಾ ಹಣಕಾಸನ್ನು ಕಸಿದುಕೊಂಡಿರುವುದರ ಕಾರಣದಿಂದ ಆಗಿದ್ದು, ಅವಳು ಜೀವನಾಂಶಕ್ಕಾಗಿ ನ್ಯಾಯಾಲಯದ ಮೊರೆಹೊಕ್ಕಿದ್ದು, ಇದು ಕಾನೂನಿನ ಜ್ಞಾನದಲ್ಲಿ ಅನ್ಯಾಯವಾಗಿದೆ ಎಂಬುದು ಸಂಗತಿಯಾಗಿದೆ. ಅವಳನ್ನು ತಂದೆ/ಎದುರುದಾರನು ನಿರ್ವಹಿಸುತ್ತಿಲ್ಲದಿರುವುದು ಅವಳ ಆರ್ಥಿಕ ಸಂಕಷ್ಟಕ್ಕೆ ಅಭದ್ರತೆಗೆ ಕಾರಣವಾಗಿದೆ. ಆದುದರಿಂದ ಅನ್ಯಾಯಕ್ಕೆ ಅವಳು ಒಳಗಾಗಿರುವಳು ಎಂಬುದು ಸಂಗತಿಯಾಗಿದೆ.

18. ಈ ಸನ್ನಿವೇಶದಲ್ಲಿ ಕೌಟುಂಬಿಕ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಇಲ್ಲಿ ಅರ್ಜಿದಾರಳು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿರುವುದು ಸರಿಯಾದುದಲ್ಲ. ಅಷ್ಟೇ ಅಲ್ಲದೆ, ಕೌಟುಂಬಿಕ ನ್ಯಾಯಾಲಯವು, ಅವಳು ಪ್ರಾಪ್ತ ವಯಸ್ಕಳಾದ ನಂತರ ಪರಿಹಾರವನ್ನು ಕೋರಲು ಇಲ್ಲಿ ಅರ್ಜಿದಾರಳಿಗೆ ಸ್ವಾತಂತ್ರವನ್ನು ಕಾಯ್ದಿರಿಸಿರುವುದು ಸರಿಯಾಗಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 125(1)ನೇ ಪ್ರಕರಣವೇ ಸನ್ನಿವೇಶವನ್ನು ಪಾಲನೆಗೆ ತೆಗೆದುಕೊಳ್ಳಬೇಕು ಎನ್ನುವಾಗ, ಪ್ರಾಪ್ತ ವಯಸ್ಕಳಾಗಿರುವ ಮಗಳೂ ಕೂಡ, ಅವಳು ಕೆಲವು ಆಕಸ್ಮಿಕ ಘಟನೆಗಳ ಅಡಿಯಲ್ಲಿ ಅವಳು ವಿವಾಹವಾಗುವವರೆಗೆ ಅವಳ ತಂದೆಯು ನಿರ್ವಹಿಸಬೇಕು

ಎಂಬುದಕ್ಕೆ ಹಕ್ಕುಳ್ಳವಳಾಗಿರುವಾಗ, ಕೌಟುಂಬಿಕ ನ್ಯಾಯಾಲಯವು, ಅವಳು ಪ್ರಾಪ್ತ ವಯಸ್ಕಳಾದ ನಂತರ ಅರ್ಜಿಯನ್ನು ಸಲ್ಲಿಸಬೇಕೆಂದು ಅರ್ಜಿದಾರಳಿಗೆ ನಿರ್ದೇಶಿಸಲಾಗಿರುವುದು ಅನಗತ್ಯವಾದುದಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 125(1) (ಸಿ) ಪ್ರಕರಣವು, ಸ್ಪಷ್ಟವಾಗಿ, ವಿವಾಹವಾಗಿರದ ಮಗಳನ್ನು ಒಳಗೊಂಡಂತೆ ಔರಸ ಅಥವಾ ಅನೌರಸ ಮಗು ಮತ್ತು ನಿರ್ವಹಿಸಲು ಪ್ರಾಪ್ತಳಾಗಿರುವ ಮಗುವು, ತಾನು ಯಾವುದೇ ದೈಹಿಕ ಅಥವಾ ಮಾನಸಿಕ ವಿಕಾರಗಳಿಂದ ಅಥವಾ ಮೇಲೆ ವಿವರಿಸಲಾದ ಅನ್ಯಾಯಕ್ಕೆ ಒಳಗಾಗಿರುವುದನ್ನು ರುಜುವಾತುಪಡಿಸಿದರೆ ಅವಳು ಹಕ್ಕುಳ್ಳವಳಾಗಿರುವಳು. ಆದುದರಿಂದ, ಗುಲ್ಬರ್ಗಾದ ಕೌಟುಂಬಿಕ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವನ್ನು ತಳ್ಳಿಹಾಕಲಾಗಿದ್ದು, ವಿಷಯವನ್ನು ಮೇಲೆ ಪರಿವೀಕ್ಷಿಸಲಾದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಗುಣಾರ್ಹತೆಯ ಮೇಲೆ ಅರ್ಜಿದಾರಳ ಪ್ರಕರಣವನ್ನು ಪರಿಗಣನೆಗಾಗಿ ಗುಲ್ಬರ್ಗಾದಲ್ಲಿರುವ ಕೌಟುಂಬಿಕ ನ್ಯಾಯಾಲಯಕ್ಕೆ ಕಳುಹಿಸಲಾಗಿದೆ. ಪಕ್ಷಕಾರರು ತಮಗೆ ಸಂಬಂಧಪಟ್ಟ ವಕೀಲರು ಪ್ರತಿನಿಧಿಸಲಾದಂತೆ ಅವರು, ಯಾವುದೇ ನ್ಯಾಯಾಲಯದಿಂದ ಬರುವ ಪ್ರತ್ಯೇಕ ಟಿಪ್ಪಣಿಯನ್ನು ನಿರೀಕ್ಷಿಸದೆ 24.4.2017ರಂದು ಕೌಟುಂಬಿಕ ನ್ಯಾಯಾಲಯದ ಮುಂದೆ ಹಾಜರಾಗತಕ್ಕದ್ದು.

20. ಕೌಟುಂಬಿಕ ನ್ಯಾಯಾಲಯಕ್ಕೆ, ಅರ್ಜಿದಾರರು ಹಾಗೂ ಎದುರುದಾರರಿಬ್ಬರು ಅರ್ಜಿದಾರಳ ಹಕ್ಕುಳ್ಳವಳಾಗಿರುವ ಜೀವನಾಂಶದ ಮೊತ್ತಕ್ಕೆ ಸಂಬಂಧಪಟ್ಟಂತೆ ನೀಡಿದ ಸಾಕ್ಷ್ಯಗಳನ್ನು ದಾಖಲಿಸಲು ಮತ್ತು ಕಾನೂನಿಗನುಸಾರವಾಗಿ ಅರ್ಜಿಯನ್ನು ವಿಲೆ ಮಾಡಲು ನಿರ್ದೇಶಿಸಿದೆ.

21. ಅರ್ಜಿಯು, 2014ನೇ ವರ್ಷದಲ್ಲಿ ಸಲ್ಲಿಸಿರುವುದರಿಂದ, ಅರ್ಜಿಯನ್ನು ಕೌಟುಂಬಿಕ ನ್ಯಾಯಾಲಯವು ತ್ವರಿತ ರೀತಿಯಲ್ಲಿ ವಿಲೇ ಮಾಡುವುದು.

---